ಶ್ರೀಪಾದರಾಜಗುರುಭ್ಯೋನಮ:
ಜ್ಞಾನವೈರಾಗ್ಯ ಭಕ್ತ್ಯಾದಿ ಕಲ್ಯಾಣಗುಣಶಾಲಿನ: ।
ಲಕ್ಷ್ಮೀನಾರಾಯಣಮುನೀನ್ ವಂದೇ ವಿದ್ಯಾಗುರೂನ್ಮಮ ॥



ಆಚಾರ್ಯ ಮಧ್ವರ ನೇರ ಶಿಷ್ಯರಾದ ಶ್ರೀಪದ್ಮನಾಭತೀರ್ಥರ ಪರಂಪರೆಯಲ್ಲಿ ವಿರಾಜಮಾನರಾಗಿದ್ದ, ಆಚಾರ್ಯ ಮಧ್ವರ ನಂತರದ 8ನೇ ಯತಿಗಳಾದ, ವ್ಯಾಸಸಾಹಿತ್ಯ ಮತ್ತು ದಾಸಸಾಹಿತ್ಯವೆರಡರಲ್ಲೂ ಕುಶಲರಾಗಿದ್ದ, ವ್ಯಾಸರಾಜರೆಂಬ ಅಮೂಲ್ಯ ವಜ್ರವನ್ನು ನೀಡಿದ, ಶ್ರೀ ಶ್ರೀಪಾದರಾಜರ ಆರಾಧನ ನಿಮಿತ್ತ ಲೇಖನ –

ಶೇಷಗಿರಿಯಪ್ಪ ಮತ್ತು ಗಿರಿಯಮ್ಮ ದಂಪತಿಗಳಲ್ಲಿ ಅಬ್ಬೂರಿನಲ್ಲಿ ಕ್ರಿ.ಶಕ. 1406ರಲ್ಲಿ "ಲಕ್ಷ್ಮೀನಾರಾಯಣ"ರೆಂಬ ನಾಮಧೇಯದಿಂದ ಜನಿಸಿ, 1411ರಲ್ಲಿ ಉಪನಯನಗೊಂಡು. 1412ರಲ್ಲಿ ಶ್ರೀರಂಗದಲ್ಲಿ ಶ್ರೀ ಸ್ವರ್ಣವರ್ಣತೀರ್ಥರ ಉತ್ತರಾಧಿಕಾರಿಯಾಗಿ ಸನ್ಯಾಸವನ್ನು ಸ್ವೀಕರಿಸಿ, "ಲಕ್ಷ್ಮೀನಾರಾಯಣಮುನಿ" ಎಂಬ ಆಶ್ರಮನಾಮವನ್ನು ಸ್ವೀಕರಿಸಿ, ನಂತರ, ಭಾಸ್ಕರಕ್ಷೇತ್ರವೆಂದು ಪ್ರಖ್ಯಾತವಾಗಿದ್ದ, ವಿಜಯನಗರದ ಅರಸರ ಎರಡನೇ ರಾಜಧಾನಿಯಾಗಿದ್ದ, ತಿರುಪತಿಯ ಪೂರ್ವದ ಬಾಗಿಲು ಎಂದು ಪ್ರಖ್ಯಾತವಾದ "ಮುಳಬಾಗಿಲು" ಕ್ಷೇತ್ರದಲ್ಲಿ 1504ರಲ್ಲಿ ಜ್ಯೇಷ್ಟ ಶುಕ್ಲ ಚತುರ್ದಶಿಯಂದು ವೃಂದಾವನಸ್ಥರಾದರು.

## ಸ್ವರ್ಣವರ್ಣತೀರ್ಥರಿಂದ – ಲಕ್ಷ್ಮೀನಾರಾಯಣನಿಗೆ ಆಶ್ರಮಪ್ರಧಾನ –

ಒಮ್ಮೆ ಶ್ರೀಸ್ವರ್ಣವರ್ಣತೀರ್ಥರು ಕಣ್ವನದೀತೀರದಲ್ಲಿರುವ ಪುರುಷೋತ್ತಮತೀರ್ಥರನ್ನು ದರ್ಶನ ಮಾಡಲು ಬಂದಾಗ, ಮುಸ್ಸಂಜೆಯಾಗಿ ಕತ್ತಲು ಕವಿದಿರಲು, ದಾರಿ ತಪ್ಪಿ, ಅಲ್ಲೇ ಹತ್ತಿರದಲ್ಲಿ ಕಂಡ ದನಕಾಯುವ ಹುಡುಗರನ್ನು ಕರೆದು "ಅಬ್ಬೂರು ಇನ್ನೂ ಎಷ್ಟು ದೂರವಿದೆಯಪ್ಪಾ?" ಎಂದು ಕೇಳಿದರು. ಶ್ರೀಗಳವರ ಪ್ರಶ್ನೆಗೆ ಬಾಲಕ ಲಕ್ಷ್ಮೀನಾರಾಯಣನು ನೇರವಾಗಿ ಉತ್ತರಿಸದೆ, ಹೇಳುತ್ತಾನೆ "ಇತ್ತ ನೋಡಿ, ಅತ್ತ ನೋಡಿ, ಹೊತ್ತು ನೋಡಿ, ಗೊತ್ತು ಮಾಡಿ". ಆ ಬಾಲಕನ ಒಗಟಿನ ಮಾತು ಶ್ರೀಗಳಿಗೆ ತಕ್ಷಣ ಅರ್ಥವಾಗಲಿಲ್ಲ. ನಂತರ ತಿಳಿಯಿತು –

**ಅತ್ತ ನೋಡಿ** ಎಂದರೆ ದನಗಳ ಕಡೆ ನೋಡಿ; **ಇತ್ತ ನೋಡಿ** ಎಂದರೆ ಚಿಕ್ಕ ಹುಡುಗನಾದ ನನ್ನನ್ನು ನೋಡಿ; **ಹೊತ್ತು ನೋಡಿ** – ಅಂದರೆ ಈ ಮುಸ್ಸಂಜೆಯನ್ನು ನೋಡಿ; ಆದ್ದರಿಂದ ಈ ವೇಳೆಯಲ್ಲಿ ಪುಟ್ಟ ಬಾಲಕ ಇರುವುದರಿಂದ ಊರು ಅತ್ಯಂತ ಸಮೀಪವೇ ಇರಬೇಕಲ್ಲವೇ? ಎಂಬುದು ಆ ಬಾಲಕನ ಅಭಿಪ್ರಾಯವಾಗಿತ್ತು. ಆ ಬಾಲಕನ ಜಾಣ್ಮೆಯ ಪ್ರಾಸಬದ್ಧವಾದ ನುಡಿ ಗಮನಿಸಿದ ಶ್ರೀಗಳು ಅವನಿಗೆ ಮನಸೋತು, ಶ್ರೀಗಳು ಆ ಬಾಲಕನನ್ನು ತಮ್ಮ ಮೇನೆಯಲ್ಲಿ ಕುಳ್ಳಿರಲು ಕರೆಯುತ್ತಾರೆ. ಆಗ ಬಾಲಕ ಹೇಳುತ್ತಾನೆ–ಸ್ವಾಮಿಗಳ ಮೇನೆಯಲ್ಲಿ ಕೂತರೆ ಸ್ವಾಮಿಗಳಾಗಿ ಬಿಡುತ್ತಾರೆ. ಈಗಾಗಲೇ ನಮ್ಮಣ್ಣ ಬ್ರಹ್ಮಣ್ಯತೀರ್ಥರು ಸ್ವಾಮಿಗಳಾಗಿದ್ದಾರೆ (ಶ್ರೀಪಾದರಾಜರ ತಾಯಿ ಮತ್ತು ಬ್ರಹ್ಮಣ್ಯತೀರ್ಥರ ತಾಯಿ – ಅಕ್ಕ ತಂಗಿಯರು).

ನಂತರ ಸ್ವರ್ಣವರ್ಣತೀರ್ಥರು ಪುರುಷೋತ್ತಮ ತೀರ್ಥರನ್ನು ಭೇಟಿಯಾದರು. ನಂತರ ತಾವು ಕಂಡ ಬಾಲಕನ ಬಗ್ಗೆ ಪುರುಷೋತ್ತಮತೀರ್ಥರಿಗೆ ತಿಳಿಸಿ, ಆ ಹುಡುಗನಿಗೇ ನಮ್ಮ ಉತ್ತರಾಧಿಕಾರಿಯಾಗಿ ಸ್ವೀಕರಿಸುವ ನಿರ್ಧಾರ ಮಾಡಿರುವುದಾಗಿ ತಿಳಿಸಿದಾಗ, ಆ ಹುಡುಗನನ್ನು ಕರೆಸಬೇಕೆಂದು ಹೇಳಿದರು. ಸ್ವರ್ಣವರ್ಣತೀರ್ಥರು ತಿಳಿಸಿದ ಬಾಲಕನ ವಿಷಯವನ್ನು ಊಗಿಸಿದ ಪುರುಷೋತ್ತಮತೀರ್ಥರು ಆ ಬಾಲಕನು ಲಕ್ಷ್ಮೀನಾರಾಯಣನೇ ಎಂದು ಊಹಿಸಿ, ಅವನ ತಂದೆ ತಾಯಿಗಳಾದ ಶೇಷಗಿರಿ – ಗಿರಿಯಮ್ಮರನ್ನು ಕರೆಸಿದರು. ಅವರ ಜೊತೆಗೆ ಬಂದಿದ್ದ ಬಾಲಕನನ್ನು ನೋಡಿ ಸ್ವರ್ಣವರ್ಣತೀರ್ಥರು "ಇವನೇ ಆ ತೇಜಸ್ವೀ ಬಾಲಕ. ಇವನನ್ನು ನಮ್ಮ ಮಠಕ್ಕೆ ಕೊಡಿಸಬೇಕೆಂದು" ನುಡಿದರು.

ನಂತರ ಸ್ವರ್ಣವರ್ಣತೀರ್ಥರು ಬಾಲಕನಿಗೆ ಉಪನಯನ ಮಹೋತ್ಸವವನ್ನು ನೆರವೇರಿಸಿದರು. ನಂತರ ಕೆಲವು ದಿನಗಳಾದ ಮೇಲೆ ಆ ಬಾಲಕನಿಗೆ ಲಕ್ಷ್ಮೀನಾರಾಯಣತೀರ್ಥರೆಂದು ನಾಮಕರಣ ಮಾಡಿ, ಆಶ್ರಮ ನೀಡಿದರು.







## ಶ್ರೀಲಕ್ಷ್ಮೀನಾರಾಯಣಮುನಿಗಳು "ಶ್ರೀಪಾದರಾಜರಾದರು"

ಒಮ್ಮೆ ಪರಮಪೂಜ್ಯ ಶ್ರೀಗಳಾದ ರಘುನಾಥತೀರ್ಥರು, ಶ್ರೀ ವಿಭುಧೇಂದ್ರತೀರ್ಥ ಶ್ರೀಪಾದರೂ, ಹಾಗೂ ಶ್ರೀಲಕ್ಷ್ಮೀನಾರಾಯಣ ತೀರ್ಥರೂ ಶ್ರೀ ಕೊಪ್ಪಕ್ಷೇತ್ರಕ್ಕೆ ದಯಮಾಡಿಸಿದ್ದರು. ಈ ಕ್ಷೇತ್ರದ ಸ್ವಾಮಿಯಾದ ನರಸಿಂಹದೇವರ ಅನುಗ್ರಹ ಸಂಪಾದಿಸುವ ಇಚ್ಛೆಯಿಂದ ಆ ಮೂರೂ ಮಂದಿ ಕೆಲವು ದಿನಗಳ ಮಟ್ಟಿಗೆ ಅಲ್ಲಿಯೇ ವಾಸಿಸಿದರು.

ಸಂಪ್ರದಾಯದಂತೆ ತಮ್ಮ ತಮ್ಮ ಶಿಷ್ಯರುಗಳಿಗೆ ಪ್ರತಿನಿತ್ಯವೂ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳ ಪಾಠಪ್ರವಚನ ನಡೆಸುತ್ತಿದ್ದರು. ಪಾಠ ಮುಗಿದ ಮೇಲೆ ಶ್ರೀಲಕ್ಷ್ಮೀ ನೃಸಿಂಹನ ಸನ್ನಿಧಿಯಲ್ಲಿ ಈ ಮೂರೂ ಜನ ಶ್ರೀಪಾದಂಗಳವರೂ ಮಧ್ಯಾಹ್ನದವರೆವಿಗೂ ಅವರವರು ಪಾಠ ಹೇಳಿದ ಭಾಗದ ವಿಶೇಷ ಸಲ್ಲಾಪಗಳಲ್ಲಿ ತೊಡಗುತ್ತಿದ್ದರು. ಆ ಸಂಧರ್ಭದಲ್ಲಿ ಶ್ರೀ


ವಿಭುದೇಂದ್ರತೀರ್ಥ ಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮ ವಿದ್ಯಾಶಿಷ್ಯರಾದ ಲಕ್ಷ್ಮೀನಾರಾಯಣಮುನಿಗಳನ್ನು ಶ್ರೀಮನ್ಯಾಯಸುಧೆಯ ಜಿಜ್ಞಾಸಾಧಿಕರಣದ ಒಂದು ಭಾಗವನ್ನು ವಿವರಿಸುವಂತೆ ಆಜ್ಞಾಪಿಸಲು, ಶ್ರೀ ಲಕ್ಷ್ಮೀನಾರಾಯಣತೀರ್ಥರು ಅನುವಾದ ಮಾಡಿದರು. ತಮ್ಮ ಪೂಜಾ ಸಮಯ ಮೀರಿದ್ದನ್ನೂ ಲೆಕ್ಕಿಸದ ಯತಿದ್ವಯರು ತದೇಕಚಿತ್ತದಿಂದ ಲಕ್ಷ್ಮೀನಾರಾಯಣಮುನಿಗಳ ಅನುವಾದವನ್ನು ಆಲಿಸಿದರು. ಅನುವಾದ ವೈಖರಿಯ ಶ್ರವಣದಿಂದ ಮಾರುಹೋದ ವಿದ್ವತ್ ಪಕ್ಷಪಾತಿಗಳಾದ ಶ್ರೀರಘುನಾಥತೀರ್ಥ ಶ್ರೀಪಾದಂಗಳವರಿಗೆ, ಹಾಗೂ ಶ್ರೀ ವಿಭುದೇಂದ್ರತೀರ್ಥರಿಗೆ ಆದ ಆನಂದಕ್ಕೆ ಪರಿಮಿತಿ ಇಲ್ಲವಾಯಿತು. ಆಗ ಶ್ರೀ ರಘುನಾಥತೀರ್ಥ ಶ್ರೀಪಾದರು, ನಾವೆಲ್ಲ ಶ್ರೀಪಾದರಾದರೆ, ತಾವು "ಶ್ರೀಪಾದರಾಜರು" ಎಂದೇ ಪ್ರಸಿದ್ದರಾಗಿರೆಂದರು. ಇಂದಿಗೂ ಶ್ರೀಲಕ್ಷ್ಮೀನಾರಾಯಣತೀರ್ಥರನ್ನು "ಶ್ರೀಪಾದರಾಜರು" ಎಂದೇ ಪರಿಚಯಿಸಬೇಕಲ್ಲದೆ, ಶ್ರೀ ಲಕ್ಷ್ಮೀನಾರಾಯಣತೀರ್ಥರೆಂದರೆ ತಿಳಿಯುವುದು ಕಷ್ಟ.



ಶ್ರೀಪಾದರಾಜರು ತಮ್ಮ ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ಶ್ರೀ ರಘುನಾಥತೀರ್ಥರು ವೈಕುಂಠ ಯಾತ್ರೆ ಪ್ರಯಾಣದವೇಳೆ ಸ್ವರ್ಗೀಯ ಪುಷ್ಪವನ್ನು ಅನುಗ್ರಹಿಸಿದ ದರ್ಶನವಿತ್ತ ಸ್ಥಳ

**ವಿಜಯನಗರದ ಅರಸನ ಬ್ರಹ್ಮಹತ್ಯಾದೋಷ ಪರಿಹಾರ** – ತಿರುಪತಿ ಕ್ಷೇತ್ರವು ಸಾಳ್ವ ನರಸಿಂಹ ಭೂಪಾಲನ ಆಳ್ವಿಕೆಯಲ್ಲಿತ್ತು. ತಿರುಪತಿಯ ಅರ್ಚಕ ವೃಂದದವರು, ದೇವರ ರಥ, ಬಂಗಾರ ಒಡವೆಗಳನ್ನು ತಮ್ಮ ಪರಿವಾರದವರಿಗೆ ಬಳಸಲು ಆರಂಭಿಸಿದ್ದರು. ಇದನ್ನು ತಿಳಿದ ಸಾಳ್ವನರಸಿಂಹ ಭೂಪಾಲನು ತಿರುಪತಿಯ ಅರ್ಚಕ

ಪರಂಪರೆಯನ್ನೆಲ್ಲ ಸಂಹರಿಸಿದನು. ಈರೀತಿ ಬ್ರಾಹ್ಮಣ ಹತ್ಯೆಯಿಂದ ಬ್ರಹ್ಮಹತ್ಯಾ ದೋಷ ಬಂದಿರಲಾಗಿ, ಶ್ರೀಪಾದರಾಜರಲ್ಲಿಗೆ ಶರಣಾಗತನಾಗಿ ಬರಲು, ಆ ರಾಜನ ಬ್ರಹ್ಮಹತ್ಯಾದೋಷವೆಲ್ಲವನ್ನೂ ಪರಿಹರಿಸಿದರು. ಅದರಿಂದ ಸಂತುಷ್ಟನಾದ ರಾಜನು ಶ್ರೀಪಾದಂಗಳವರಿಗೆ ತನ್ನ ರತ್ನ ಸಿಂಹಾಸನದಲ್ಲಿ ಕುಳ್ಳಿರಿಸಿ, ರತ್ನಾಭಿಷೇಕ ಮಾಡಿಸಿದನು.




**Bichale – Sripadaraja Pratistita Nrusimha**

## ಬ್ರಾಹ್ಮಣನ ಬ್ರಹ್ಮಹತ್ಯಾದೋಷ ಪರಿಹಾರ –

"ವಿಪ್ರಗೆ ಬ್ರಹ್ಮಹತ್ಯಾದೋಷ ಬರಲು ಕ್ಷಿಪ್ರ ಶಂಖೋದಕದಿ ಕಳೆಯೆ
ಅಪ್ರಬುದ್ಧರು ದೂಷಿಸೆ, ಗೇರಣ್ಣೆ ಕಪ್ಪು ವಸನ ಹಸನು ಮಾಡಿದ
ಮಹಿಮೆ ಸಾಲದೇ? ಇಷ್ಟೇ ಮಹಿಮೆ ಸಾಲದೇ?

ಶಂಖಸ್ಥಿತೇನಪಯಸಾ ದ್ವಿಜಘಾತಪಾತೆ ।
ದೂರೀಕೃತೇ ಬಹುಜನೇಷು ವಿಶಂಕಿತೇಷು ।
ತೇನೈವಶೋಧಿತ ಮಲೀಮಸಕರ್ಪಟಾಯ ।
ಶ್ರೀಪಾದರಾಜಗುರವೇಸ್ತುನಮ: ಶುಭಾಯ ॥

ಒಮ್ಮೆ ಒಬ್ಬ ವಿಪ್ರೋತ್ತಮನಿಗೆ ಆಕಸ್ಮಿಕವಾಗಿ ಬ್ರಹ್ಮಹತ್ಯಾದೋಷವು ಘಟಿಸಲು, ಬಲು ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ. ಕಡೆಗೆ ತಪೋಧನರಾದ ಶ್ರೀ ಶ್ರೀಪಾದರಾಜರಲ್ಲಿ ಶರಣಾಗತನಾದಾಗ, ಶ್ರೀಪಾದರಾಜರ ಅನುಜ್ಞೆಯಂತೆ ಪ್ರತಿದಿನ ದೇವರ ಪೂಜೆಯ

ಕಾಲದಲ್ಲಿ ಬಂದು ಶಂಖೋದಕವನ್ನು ಪ್ರೋಕ್ಷಣೆ ಪಡೆಯುತ್ತಿದ್ದರು. ಕೆಲವು ದಿನಾನಂತರ ಬ್ರಹ್ಮಹತ್ಯಾದೋಷವು ಸಂಪೂರ್ಣವಾಗಿ ನಿವಾರಣೆಯಾಯಿತು ಎಂದು ಶ್ರೀಪಾದರಾಜರು ಹೇಳಿದರು. ಅದನ್ನು ಕೇಳಿದ ಕೆಲವು ಕುಹಕಿ ಶಿಷ್ಯರುಗಳು ಕುಯುಕ್ತಿಯಿಂದ ಎಲ್ಲಿಯಾದರೂ ಬ್ರಹ್ಮಹತ್ಯಾದೋಷವು ಕೇವಲ ಶಂಖೋದಕದಿಂದಲೇ ಪರಿಹಾರವಾಗುವುದೇ ಎಂದು ಪ್ರಶ್ನಿಸಿದರು. ಈ ವಿಷಯವನ್ನು ಹೇಗೋ ತಿಳಿದ ಶ್ರೀಗಳು ಆ ಕುಹಕಿ ಶಿಷ್ಯರನ್ನೇ ಕರೆದು – "ಒಂದು ಶುಭ್ರವಾದ ಧವಳ ವಸ್ತ್ರವನ್ನು ತರಿಸಿ ಅದನ್ನು ಗೇರೆಣ್ಣೆಯಲ್ಲಿ ಅದ್ದಿ, ಬಹಳ ಕೊಳೆ ಮಾಡಿ, ಈ ವಸ್ತ್ರವನ್ನು ಹೇಗಾದರೂ ಮಾಡಿ ಮೊದಲಿನಂತೆ ಶುಭ್ರ ಮಾಡಿಕೊಂಡು ಬನ್ನಿರಿ" ಎಂದರು. ಆ ಶಿಷ್ಯರೆಲ್ಲರೂ ಎಷ್ಟೇ ಪ್ರಯತ್ನ ಪಟ್ಟರೂ ಅದು ಶುಭ್ರವಾಗಲೇ ಇಲ್ಲ. ಮತ್ತು ಆ ವಸ್ತ್ರವನ್ನು ಗುರುಗಳಿಗೆ ಒಪ್ಪಿಸಿ, ಈ ವಸ್ತ್ರವನ್ನು ಶುದ್ಧವಾಗಿ ಮಾಡಲು ಆಗುವುದಿಲ್ಲ ಎಂದರು. ಆಗ ಶ್ರೀಗಳು ಆ ವಸ್ತ್ರದ ಮೇಲೆ ಬಿದಿರಿನ ಬುಟ್ಟಿಯೊಂದನ್ನು ಮುಚ್ಚಿ ಪ್ರತಿದಿನ ಪೂಜಾದಿಗಳು ಮುಗಿದ ನಂತರ ಶಂಖೋದಕದಿಂದ ಅದನ್ನು ಏಳು ದಿನಗಳವರೆಗೆ ಪ್ರೋಕ್ಷಣೆ ಮಾಡುತ್ತಿದ್ದರು. ಏಳು ದಿನಗಳ ನಂತರ ಆ ವಸ್ತ್ರವು ತನ್ನ ಹಿಂದಿನ ಶುಭ್ರವರ್ಣವನ್ನು ಮತ್ತೆ ಪಡೆಯಿತು. ಆಗ ಗುರುಗಳು ಅವರಿಗೆ ಅಭಯ ನೀಡಿ "ಶಂಖೋದಕ ಪ್ರಭಾವದಿಂದ ಹೇಗೆ ಆ ವಸ್ತ್ರವು ಶುದ್ಧಿಯಾಯಿತೋ, ಹಾಗೆಯೇ ಅತೀಂದ್ರಿಯವಾದ ಬ್ರಹ್ಮಹತ್ಯಾದೋಷವೂ ಸಹ ಪರಿಹಾರವಾಗುತ್ತದೆ" ಎಂದು ಶಿಷ್ಯರಿಗೆ ತಿಳಿಸಿದರು.

**"ರಂಗವಿಠಲ" ಅಂಕಿತ –** ಒಮ್ಮೆ ಶ್ರೀ ವ್ಯಾಸರಾಜರಿಗೆ ಪಾಂಡುರಂಗನು ಸ್ವಪ್ನದಲ್ಲಿ ಕಂಡು ತಮ್ಮ ಗುರುಗಳೊಡನೆ ಪಂಢರಾಪುರಕ್ಕೆ ಬರಬೇಕೆಂದು ಆಹ್ವಾನವಿತ್ತಂತೆ ಆಯಿತು. ಅದರಂತೆ ಅವರು, ಶ್ರೀಪಾದರಾಜರು ಮತ್ತು ಶ್ರೀಬ್ರಹ್ಮಣ್ಯತೀರ್ಥರೊಡನೆ ಪಂಡರಾಪುರಕ್ಕೆ ಆಗಮಿಸಿದರು. ಅಲ್ಲಿಗೆ ಬಂದ ಮೇಲೆ ಒಮ್ಮೆ ಶ್ರೀಪಾದರಾಜರ ಸ್ವಪ್ನದಲ್ಲಿ ವಿಠ್ಠಲನು ಕಾಣಿಸಿಕೊಂಡು ಶ್ರೀ ಭೀಮರಥಿ ಪುಷ್ಪಾವತಿ ಸಂಗಮ ಕ್ಷೇತ್ರದಲ್ಲಿ ಪಾಂಡವ ವಂಶೀಯನಾದ ಶ್ರೀಕ್ಷೇಮಕಾಂತ ಮಹಾರಾಜ ಒಂದು ಪೆಟ್ಟಿಗೆಯನ್ನು ಭೂಸ್ಥಾಪನೆ ಮಾಡಿರುವುದಾಗಿ ತಿಳಿಸಿ ಅದನ್ನು ಪ್ರತಿನಿತ್ಯ ಪೂಜಿಸುವಂತೆ ಆದೇಶ ನೀಡಿದಂತಾಯಿತು.



ಶ್ರೀಪಾದರಾಜರ ಅಂಕಿತದ ಹಾಗೂ ಅವರು ಪೂಜೆ ಮಾಡುತ್ತಿದ್ದ "ರಂಗವಿಠಲ" ವಿಗ್ರಹ



ಅದರಂತೆ ಮಾರನೇ ದಿನ ಅರುಣೋದಯಕಾಲದಲ್ಲೇ, ಸ್ವಪ್ನ ನಿರ್ದಿಷ್ಟವಾದ ಸ್ಥಳದಲ್ಲಿ ಅಗೆದಾಗ ಅಲ್ಲಿ ಒಂದು ದೇವರ ಪೆಟ್ಟಿಗೆ ದೊರೆಯಿತು. ಅದನ್ನು ತೆಗೆದು ನೋಡಿದಾಗ ಅದರಲ್ಲಿ ಎರಡು ಸಂಪುಟಗಳು ದೊರೆತವು. ಒಂದನ್ನು ತೆಗೆದಾಗ ಶ್ರೀ ರುಕ್ಮಿಣೀ ಸತ್ಯಭಾಮಾ ಸಹಿತ ರಂಗವಿಠಲ ಮೂರ್ತಿಯ ದರ್ಶನವಾಯಿತು. ಅಲ್ಲಿಯವರೆಗೂ ಗೋಪೀನಾಥ ಮುದ್ರಿಕೆಯಿಂದ ಕನ್ನಡ ದೇವರನಾಮ ರಚಿಸುತ್ತಿದ್ದ ಅವರು ನಂತರ **"ರಂಗವಿಠಲ"** ಅಂಕಿತದಿಂದಲೇ ಕೃತಿಗಳನ್ನು ರಚಿಸಲು ಆರಂಭಿಸಿದರು.

**"ಗೋಪೀನಾಥದೇವರು"**– ಶ್ರೀಮದಾಚಾರ್ಯರು ತಾವು ನಿತ್ಯ ಪೂಜಿಸುತ್ತಿದ್ದ "ಗೋಪೀನಾಥ" ದೇವರನ್ನು ಮತ್ತು ಶ್ರೀ ಪ್ರಸನ್ನ ರಾಮದೇವರ ಪ್ರತಿಮೆಗಳನ್ನು ತಮ್ಮ ಪ್ರಥಮ ಶಿಷ್ಯರಾದ ಶ್ರೀ ಪದ್ಮನಾಭತೀರ್ಥರಿಗೆ ನೀಡಿದ್ದರು. ಆ ಪ್ರತಿಮೆ ಕ್ರಮೇಣ ಶ್ರೀಪಾದರಾಜರ ಮೂಲ ಪ್ರತಿಮೆಗಳಲ್ಲೊಂದಾಯಿತು.

**ಅರಣ್ಯದಲ್ಲೂ ೬೪ ಬಗೆಯ ಭಕ್ಷ್ಯ ಭೋಜ್ಯ ನಿವೇದನ** – ಶ್ರೀಪಾದರಾಜರು ಪ್ರತಿನಿತ್ಯ ರಂಗವಿಠಲನಿಗೆ ೬೪ ಬಗೆಯ ಭಕ್ಷ್ಯಭೋಜ್ಯಗಳನ್ನು ನಿವೇದಿಸಿ ಸೇವಿಸುತ್ತಿದ್ದರು. ಇದರಲ್ಲಿ ಅವರ ಚಿಂತನಾಕ್ರಮ ಹೀಗಿತ್ತು – ನಮ್ಮ ದೇಹದಲ್ಲಿ ೬೪ ದೇವತೆಗಳು ಪ್ರತಿ ಅಂಗದಲ್ಲೂ ಅಭಿಮಾನಿ ದೇವತೆಗಳಾಗಿದ್ದು, ಅವರೊಳಗೆ ಅಂತರ್ಯಾಮಿಯಾಗಿ ಶ್ರೀಹರಿಯು ಇದ್ದು ಎಲ್ಲಾ ಭಕ್ಷ್ಯಭೋಜ್ಯಗಳಲ್ಲೂ ಇರುತ್ತಾನೆ. ಆದ್ದರಿಂದ ತಾವು ನಿವೇದಿಸುವ ಆಹಾರ ತತ್ತತ್ ರೂಪಿ ಪರಮಾತ್ಮನಿಗೇ. ಈಗಲೂ ಕೂಡ ಮುಳಬಾಗಿಲಿನಲ್ಲಿ ಪ್ರತಿನಿತ್ಯ ೬೪

ಬಗೆಯ ಭಕ್ಷ್ಯಭೋಜ್ಯಗಳನ್ನು ನಿವೇದಿಸುವ ಪರಿಪಾಠವಿದೆ. ಇದನ್ನೇ ವ್ಯಾಸರಾಜರು ಹೇಳುತ್ತಾರೆ "ಹರಿಗರ್ಪಿಸಿದ ನಾನಾ ಪರಿಯ ಶಾಕಂಗಳನ್ನು ಭುಂಜಿಸೆ, ನರರು ನಗಲು ಶ್ರೀಕೃಷ್ಣ ಕರುಣದಿಂದ ಹಸಿಯ ಮಾಡಿದ ಮಹಿಮೆ ಸಾಲದೆ".

ಒಮ್ಮೆ ಕೆಲವರು ಶ್ರೀಪಾದರಾಜರನ್ನು ಹೇಗೆ ೬೪ ಬಗೆಯ ಭಕ್ಷ್ಯಗಳನ್ನು ಎಲ್ಲ ಕಡೆ ಸಮರ್ಪಿಸುತ್ತಾರೆ ಎಂದು ಪರೀಕ್ಷಿಸಲೋಸುಗ ಅವರ ಮಾರ್ಗವನ್ನು ಬೇಕೆಂದೇ ಬದಲಾಯಿಸಿ, ಘೋರವಾದ ಅರಣ್ಯದಲ್ಲಿ ಕರೆದುಕೊಂಡು ಹೋಗಿ, ಅಲ್ಲಿ ಅಡಿಗೆಗೆ ಏನೂ ಸಿಗದಿದ್ದಾಗ, ದೇವರ ನೈವೇದ್ಯವನ್ನು ಹೇಗೆ ಮಾಡುವುದು ಎಂದು ಚಿಂತಿಸುತ್ತಿದ್ದಾಗ, ಒಬ್ಬ ವ್ಯಾಪಾರಿಯು ಹಲವಾರು ಬಂಡಿಗಳಲ್ಲಿ ಅವರಿಗೆ ಬೇಕಾದ ಎಲ್ಲ ಪದಾರ್ಥಗಳನ್ನು ಆ ಅರಣ್ಯದಲ್ಲೇ ಸಮರ್ಪಿಸಿದನು. ಶ್ರೀಪಾದರು ಅಂದು ಕೂಡ ೬೪ ಬಗೆಯ ಭಕ್ಷ್ಯಭೋಜ್ಯಗಳನ್ನು ನಿವೇದಿಸಿ ಸ್ವೀಕರಿಸಿದರು. ಆ ವ್ಯಾಪಾರಿಯಾದರೂ ತಿರುಪತಿಗೆ ಹೋಗುವ ಮಾರ್ಗದಲ್ಲಿ ಶ್ರೀಹರಿಯ ಇಚ್ಛೆಯಂತೆ ದಾರಿತಪ್ಪಿ ಅದೇ ಘೋರಾರಣ್ಯಕ್ಕೆ ತಲುಪಿ, ಅಲ್ಲಿ ಪರಮಾತ್ಮನಿಂದ ಕನಸಿನಲ್ಲಿ ಆಜ್ಞಾಪ್ತನಾಗಿ, ತಾನು ತಂದಿದ್ದ ಎಲ್ಲ ಪದಾರ್ಥಗಳನ್ನೂ ಶ್ರೀಗಳವರನ್ನು ಹುಡುಕಿಕೊಂಡು ಬಂದು ಸಮರ್ಪಿಸಿದನು.

**ಸುಖಪ್ರಾರಬ್ಧ –** ಅವರು ಪ್ರತಿನಿತ್ಯ ಮುತ್ತಿನ ಕವಚ ಕಿರೀಟ ಕವಚ ಕುಂಡಲ ಧರಿಸುತ್ತಿದ್ದರು. ಇಲ್ಲಿ ಅವರ ಕಲ್ಪನೆ ತಮ್ಮ ದೇಹಕ್ಕೆ ಅಲಂಕಾರವಲ್ಲ, ಅವರಿಗೆ ಯಾವ ದೇಹಾಭಿಮಾನವೂ ಇರಲಿಲ್ಲ. ತಾವು ಹಾಕಿಕೊಳ್ಳುತ್ತಿದ್ದ ಆಭರಣವೆಲ್ಲ ನಮ್ಮ ದೇಹದಲ್ಲಿರುವ ಪರಮಾತ್ಮನಿಗೆ ಸಮರ್ಪಣೆ, ಅವನಿಗೆ ಆಭರಣವೆನ್ನುವ ಚಿಂತನಾಕ್ರಮ ಅವರಲ್ಲಿತ್ತು. ಒಮ್ಮೆ ಶ್ರೀಗಳವರ ದರ್ಶನ ಮಾಡಲು ಬಂದ ಚಂದ್ರಗಿರಿಯ ಸಾಳ್ವ ನರಸಿಂಹರಾಯನಿಗೆ ಅವರ ಬದಲಾಗಿ ಚತುರ್ಭುಜಯುಕ್ತನಾದ ವಾಸುದೇವ ಮೂರ್ತಿಯನ್ನು ಕಂಡನಂತೆ.



Panchamruta abhisheka to Sripadarajaru

## ಯೋಗಸಿದ್ಧಿಯಿಂದ ಮನೋಭಿಲಾಷೆ ತೃಪ್ತಿಗೊಳಿಸಿದ ಶ್ರೀಪಾದರು –

ಒಮ್ಮೆ ಚೈತ್ರ ಮಾಸದಲ್ಲಿ, ಭೋಜನಾನಂತರ ಪ್ರಯಾಣ ಮಾಡುತ್ತಿದ್ದಾಗ, ಮಾರ್ಗದಲ್ಲಿ, ಅವರ ಜೊತೆಗಿದ್ದ ಸಮಸ್ತ ಬ್ರಾಹ್ಮಣ ವೃಂದವೂ, ಇಲ್ಲೇ ಹತ್ತಿರದಲ್ಲಿ ಒಂದು ಉದ್ಯಾನವನ, ಪುಷ್ಕರಿಣಿ ಇದ್ದರೆ ಪಾನಕ ಪೂಜಾದಿಗಳನ್ನು ಮಾಡಬಹುದಿತ್ತಲ್ಲವೇ? ಎಂದು ಮಾತಾಡಿಕೊಂಡರು. ಬಾಯಾರಿಕೆಯಿಂದ ಬಳಲಿರುವುದನ್ನು ಗಮನಿಸಿ, ಅಲ್ಲೇ ಒಂದು ಉದ್ಯಾನವನ್ನು ಸೃಷ್ಟಿಸಿ, ಪುಷ್ಕರಿಣಿಯನ್ನೂ ಸೃಷ್ಟಿಸಿ, ವ್ಯಜನ ಪಾನಕ ಗುಡೋದಕಗಳನ್ನೆಲ್ಲಾ ಗೋಪೀನಾಥನಿಗೆ ಸಮರ್ಪಿಸಿದರು. ಶಿಷ್ಯ ಪರಿವಾರವೆಲ್ಲ ಸುಖತಪ್ತರಾಗಿ ಮುಂದಿನ ಪ್ರಯಾಣ ಬೆಳೆಸಿದರು.

## ಅದ್ವೈತಿಗಳಿಂದ ಶ್ರೀಪಾದರಾಜ ಪ್ರಶಂಸೆ –

ಶ್ರೀ ವ್ಯಾಸರಾಜರಿಂದ ವಾಗ್ವಾದದಲ್ಲಿ ಸೋತು ಶರಣಾದ ಪಕ್ಷಧರಮಿಶ್ರ ಮುಂತಾದ ಪಂಡಿತರು, ಈ ಶಿಷ್ಯನಿಂದಲೇ ಸೋತ ಅವರ ಗುರುಗಳ ದರ್ಶನಾರ್ಥಿಯಾಗಿ ಮುಳಬಾಗಿಲಿಗೆ ಬಂದು ಶ್ರೀಪಾದರಾಜರಿಗೆ ಹೇಳಿದರು "ನವೀನನ್ಯಾಯದಲ್ಲಿ ಇಡೀ ಭಾರತದಲ್ಲೇ ನನ್ನನ್ನು ಎದುರಿಸುವವರು ಯಾರೂ ಇಲ್ಲವೆಂದೇ ಭಾವಿಸಿದ್ದೆ. ಆದರೆ ತಮ್ಮ ಶಿಷ್ಯರಾದ ವ್ಯಾಸರಾಜರು ನಾನು ಅಧ್ಯಯನ ಮಾಡಿದ್ದೆಲ್ಲವನ್ನೂ ಮಾಡಿದ್ದಾರೆ. ನಾನು ಅಧ್ಯಯನ ಮಾಡದೇ ಇರುವುದನ್ನೂ ಮಾಡಿದ್ದಾರೆ. ಅವರು ಬರಿಯ ವ್ಯಾಸರಲ್ಲ, ನವೀನ

ವ್ಯಾಸರು. ಅಂತಹ ಶಿಷ್ಯನನ್ನು ಕೊಟ್ಟ ನಿಮಗೆ ಸಾಷ್ಟಾಂಗ ನಮಸ್ಕಾರಗಳು". ಈರೀತಿಯಾಗಿ ಶ್ರೀಪಾದರಾಜರು ಹೆಚ್ಚಾಗಿ ಗ್ರಂಥಗಳನ್ನು ಬರೆದಿರಬಹುದು, ಆದರೆ ಅವರು ತಯಾರು ಮಾಡಿದ ವ್ಯಾಸರಾಜರು ತಮ್ಮ ಅಮೋಘ ಗ್ರಂಥಗಳಾದ ಚಂದ್ರಿಕ, ನ್ಯಾಯಮೃತ, ತರ್ಕತಾಂಡವ, ಮುಂತಾದ ಗ್ರಂಥಗಳಿಂದ ಇಡೀ ಮಾಧ್ವ ಸಮಾಜವನ್ನೇ ಎತ್ತಿ ಬೆಳಗಿಸಿದ್ದಾರೆ. ಅಂತಹ ಶಿಷ್ಯನನ್ನು ಕರುಣಿಸಿದ ಶ್ರೀಪಾದರಾಜರಿಗೆ ನಮನ.



Narasimha Tirtha



Ratha @ Narasimha Tirtha

| | |
|---|---|
| ತಂದೆ | ಶೇಷಗಿರಿಯಪ್ಪ |
| ತಾಯಿ | ಗಿರಿಯಮ್ಮ |
| ವಾಸಸ್ಥಳ | ಅಬ್ಬೂರು |
| ಜನನ | 1406 |
| ಪೂರ್ವಾಶ್ರಮನಾಮ | ಲಕ್ಷ್ಮೀನಾರಾಯಣ |
| ಉಪನಯನ | ಸ್ವರ್ಣವರ್ಣತೀರ್ಥರ ಸಮ್ಮುಖದಲ್ಲಿ 1411 |
| ಆಶ್ರಮಗುರುಗಳು | ಶ್ರೀ ಸ್ವರ್ಣವರ್ಣತೀರ್ಥರು<br>( ಶ್ರೀ ಪರಶುರಾಮತೀರ್ಥರು) |
| ಸನ್ಯಾಸ ಸ್ವೀಕಾರ | ಶ್ರೀರಂಗಂ – 1412ರಲ್ಲಿ |
| ಆಶ್ರಮನಾಮ | ಶ್ರೀಲಕ್ಷ್ಮೀನಾರಾಯಣತೀರ್ಥರು |
| ಆಶ್ರಮಶಿಷ್ಯರು | ಶ್ರೀ ಹಯಗ್ರೀವತೀರ್ಥರು |
| ವಿದ್ಯಾ ಗುರುಗಳು | ಶ್ರೀ ವಿಭುದೇಂದ್ರ ತೀರ್ಥರು |
| ವೃಂದಾವನ ಪ್ರವೇಶ | ಕ್ರೈ.ಶ.1504, ಜ್ಯೇಷ್ಟ ಶುದ್ದ ಚತುರ್ದಶಿ |
| ಮೂಲವೃಂದಾವನ | **ಮುಳುಬಾಗಿಲಿನ** ನರಸಿಂಹತೀರ್ಥದ ಬಳಿ |
| ಉಪಾಸ್ಯಮೂರ್ತಿ | ಶ್ರೀ ಗೋಪೀನಾಥದೇವರು |
| ರಂಗವಿಠಲನ ಅನುಗ್ರಹ | ಭೀಮಾನದಿತೀರದಲ್ಲಿ ಸಿಕ್ಕ ಎರಡು ಸಂಪುಟದಲ್ಲಿ |
| ಪ್ರಧಾನ ವಿದ್ಯಾಶಿಷ್ಯರು | ಶ್ರೀ ವ್ಯಾಸರಾಜರು |
| ಅಂಕಿತ | "ಗೋಪೀನಾಥ" & "ರಂಗವಿಠಲ" |
| ಗ್ರಂಥ | ವಾಗ್ವಜ್ರ(ಸಂಸ್ಕೃತ) |
| ಬ್ರಹ್ಮಹತ್ಯಾದೋಷ ನಿವಾರಣೆ | ಕ್ರಿ.ಶ.1468ರಲ್ಲಿ ಸಾಳ್ವನರಸಿಂಹನಿಗೆ |
| ರತ್ನಾಭಿಷೇಕ | ವಿಜಯನಗರದಲ್ಲಿ–ಸಾಲ್ವ ನರಸಿಂಹ ಮಹಾರಾಜ |
| ಪ್ರತಿದಿನದ ನೈವೇದ್ಯ | 64 ಬಗೆಯ ಭಕ್ಷ್ಯಭೋಜ್ಯ ಸೇವಿಸುತ್ತಿದ್ದರು |
| ಬ್ರಹ್ಮಣ್ಯಪುರದಲ್ಲಿ ಮುಖ್ಯಪ್ರಾಣ ಪ್ರತಿಷ್ಟೆ | ಯತಿತ್ರಯರಾದ ಶ್ರೀಪಾದರಾಜರು, ಬ್ರಹ್ಮಣ್ಯ ತೀರ್ಥರು, ವ್ಯಾಸರಾಜರು ಒಟ್ಟಿಗೆ ಮುಖ್ಯ ಪ್ರಾಣ ದೇವರನ್ನೂ, ಸೀತಾ ಲಕ್ಷ್ಮಣ ಸಮೇತ ರಾಮಚಂದ್ರನನ್ನೂ ಪ್ರತಿಷ್ಟೆ ಮಾಡಿದ್ದಾರೆ |

| | |
|---|---|
| "ಶ್ರೀಪಾದರಾಜ" ಬಿರುದು | ಶ್ರೀ ರಘುನಾಥತೀರ್ಥರಿಂದ ಕೊಪ್ಪರ ನರಸಿಂಹಕ್ಷೇತ್ರದಲ್ಲಿ |
| ವಿದ್ಯಾಪೀಠ ಸ್ಥಾಪನೆ | ಸನ್ಯಾಸಿಗಳಿಗೆ, ಗೃಹಸ್ಥರಿಗೆ ಪಾಠ ಪ್ರವಚನಕ್ಕಾಗಿ ಮುಳಬಾಗಿಲಲ್ಲಿ ವಿದ್ಯಾಪೀಠ ಸ್ಥಾಪನೆ |
| ಕನ್ನಡ ಗ್ರಂಥಗಳು | ಅನೇಕ ಕೀರ್ತನೆಗಳು, ಸುಳಾದಿಗಳು, ಉಗಾ ಭೋಗ, ನರಸಿಂಹದಂಡಕ, ಮಧ್ವ ನಾಮ, ವೇಣುಗೀತೆ, ಭ್ರಮರಗೀತೆ, ಇತ್ಯಾದಿ. |
| ಸಮಕಾಲೀನರು | ಶ್ರೀರಘುನಾಥತೀರ್ಥರು, ಶ್ರೀಬ್ರಹ್ಮಣ್ಯ ತೀರ್ಥರು, ಶ್ರೀವಿಭುದೇಂದ್ರತೀರ್ಥರು, ಸಾಳ್ವ ನರಸಿಂಹ ಭೂಪಾಳ, ಪುರಂದರದಾಸರು |

**ಸಂಗ್ರಹ ಲೇಖನ – ನರಹರಿಸುಮಧ್ವ**

**09042729165**

www.sumadhwaseva.com